ಏಳನೆಯ ಸೂತ್ರ

## ಸತ್ಯಂ ಚ ॥೭॥

**೭.ಸತ್ಯವೂ ಸಹ.**

ಹಿಂದೂಧರ್ಮದ ಎಲ್ಲಾ ಶಾಸ್ತ್ರಗ್ರಂಥಗಳೂ ಸತ್ಯಕ್ಕೆ ಮಹತ್ತರ ಸ್ಥಾನವನ್ನು ನೀಡಿವೆ. ತೈತ್ತಿರೀಯ ಉಪನಿಷತ್ತು ಪರಬ್ರಹ್ಮನನ್ನು **'ಸತ್ಯಂ ಜ್ಞಾನಮ್ ಅನಂತಮ್'** ಎಂದು ಕರೆದಿದೆ (೨-೧).

ಶ್ರೀರಾಮಕೃಷ್ಣರು ಕಲಿಯುಗದಲ್ಲಿ ಸತ್ಯದ ಆರಾಧನೆಯೇ ಮುಖ್ಯವಾದ ಮತ್ತು ಅವಶ್ಯವಾದ ಸಾಧನೆ ಎಂದು ಹೇಳಿದ್ದಾರೆ **(ಉಪದೇಶಾಮೃತ – ೫೩೦)**. ಸತ್ಯವು ದ್ವಿಮುಖವಾಗಿದೆ. **ಸತ್ಯವಚನ** ಮತ್ತು **ವಚನಸತ್ಯ** (ಸತ್ಯವನ್ನು ನುಡಿಯುವುದು – ನುಡಿದಂತೆ ನಡೆಯುವುದು). ಶ್ರೀರಾಮಕೃಷ್ಣರ ಜೀವನದಲ್ಲಿ ಇವೆರಡೂ ಹಾಸುಹೊಕ್ಕಾಗಿರುವುದನ್ನು ಕಾಣಬಹುದು.

ಶ್ರೀರಾಮಕೃಷ್ಣರು ತಮ್ಮ ಸಾಧನೆಗಳ ಕಡೆಯ ಹಂತದಲ್ಲಿ, ತದ್ವಿರುದ್ಧವಾದ ಎಲ್ಲ ದ್ವಂದ್ವಗಳನ್ನು, ಅಂದರೆ ಜ್ಞಾನ–ಅಜ್ಞಾನ, ಶುದ್ಧತೆ–ಅಶುದ್ಧತೆ ಇತ್ಯಾದಿಗಳನ್ನು ಜಗನ್ಮಾತೆಗೆ ಅರ್ಪಿಸಿರುವುದು ಕಾಣಬರುತ್ತದೆ. ಆದರೆ ಅವರು ಸತ್ಯ–ಅಸತ್ಯಗಳನ್ನು ಅರ್ಪಿಸಲಾಗಲಿಲ್ಲ. ಏಕೆಂದರೆ ಎಲ್ಲವನ್ನೂ ಅರ್ಪಿಸಿದರೆ ಜೀವನವನ್ನು ಸಾಗಿಸಲು ಮತ್ತೇನೂ ಉಳಿಯುವುದಿಲ್ಲ. ಜೀವನಕ್ಕೆ ಏನಾದರೂ ಒಂದು ಆಧಾರ ಬೇಕೇ ಬೇಕು. ಅದೇ ಸತ್ಯ.

ಕೊಟ್ಟ ಮಾತಿಗೆ ತಪ್ಪಬಾರದು ಎಂಬ ನಿಯಮವನ್ನು ಶ್ರೀರಾಮಕೃಷ್ಣರು ಅಕ್ಷರಶಃ ಪಾಲಿಸುತ್ತಿದ್ದರು. ಅದೇ ಅವರ ಜೀವಾಳವಾಗಿತ್ತು. ಯದುಮಲ್ಲಿಕನೆಂಬ ಭಕ್ತನು ದಕ್ಷಿಣೇಶ್ವರದ ದೇವಾಲಯಗಳ ಸಂಕೀರ್ಣದ ಪಕ್ಕದಲ್ಲೇ ವಾಸಿಸುತ್ತಿದ್ದನು. ಒಂದು ದಿನ ಅವನ ಮನೆಗೆ ಬರುವುದಾಗಿ ಶ್ರೀರಾಮಕೃಷ್ಣರು ಮಾತುಕೊಟ್ಟಿದ್ದರು. ಏಕೋ ಏನೋ ಶ್ರೀರಾಮಕೃಷ್ಣರಿಗೆ ಅದು ಮರೆತು ಹೋಗಿತ್ತು. ಆ ದಿನ ರಾತ್ರಿ ಅದು ಅವರಿಗೆ ಜ್ಞಾಪಕಕ್ಕೆ ಬಂತು. ರಾತ್ರಿ ಬಹಳ ಹೊತ್ತಾಗಿದ್ದರೂ, ಅವರು ಯದುಮಲ್ಲಿಕನ ಮನೆಯವರೆಗೂ ಹೋಗಿ, ಒಳಕ್ಕೆ ನಾಲ್ಕು ಹೆಜ್ಜೆಯಿಟ್ಟ ನಂತರವೇ ತಮ್ಮ ಕೊಠಡಿಗೆ ಹಿಂತಿರುಗಿದರು.

ಸಾಮಾನ್ಯ ಜನರಿಗೆ ಈ ಎಲ್ಲ ಶಿಸ್ತು–ನಿಯಮಗಳನ್ನು ಪಾಲಿಸುವುದು ಬಹು ಕಠಿಣ. ಇದಕ್ಕೇನಾದರೂ ಸುಲಭವಾದ ಪರಿಹಾರ ಮಾರ್ಗವಿದೆಯೇ ಎಂದರೆ **"ಹೌದು, ಇದೆ"** ಎನ್ನುತ್ತಾರೆ ಶ್ರೀರಾಮಕೃಷ್ಣರು.

ಎಂಟನೆಯ ಸೂತ್ರ

## ವ್ಯಾಕುಲತಯೈವಾಪಿ ಈಶ್ವರಸಾಕ್ಷಾತ್ಕಾರಃ ಸಾಧ್ಯಃ ॥೮॥

**೮. ಭಗವಂತನ ಸಾಕ್ಷಾತ್ಕಾರವು ತೀವ್ರ ವ್ಯಾಕುಲತೆಯಿಂದಲೂ ಸಾಧ್ಯ.**

ಮಗುವು ಆಟದ ಸಾಮಾನುಗಳೊಡನೆ ಆಟವಾಡುವ ಮತ್ತು ತಾಯಿಯು ಅಡುಗೆಮನೆಯಲ್ಲಿ ಅಡುಗೆಯಲ್ಲಿ ತೊಡಗಿರುವ ನಿದರ್ಶನಗಳಿಂದ ಶ್ರೀರಾಮಕೃಷ್ಣರು ಈ ಉಪದೇಶವನ್ನು ಸ್ಪಷ್ಟಪಡಿಸುತ್ತಾರೆ. ಮಗುವು ತನ್ನ ಆಟಿಕೆಗಳೊಡನೆ ಸಂತೋಷದಿಂದ ಇರುವಾಗ ತಾಯಿಯ ಗಮನ ಮಗುವಿನ ಮೇಲಿದ್ದರೂ, ಅವಳು ಮಗುವನ್ನು ಅದರ ಪಾಡಿಗೆ ಬಿಟ್ಟಿರುತ್ತಾಳೆ. ಆದರೆ ಮಗುವಿಗೆ ಆಟಿಕೆಗಳು ಸಾಕಾಗಿ, ತಾಯಿಗಾಗಿ ಹಂಬಲಿಸಿ ಅಳಲು ಪ್ರಾರಂಭಿಸಿದಾಗ, ಅವಳು ಒಡನೆಯೆ, ಒಲೆಯ ಮೇಲೆ ಇಟ್ಟಿರುವ ಪಾತ್ರೆಯನ್ನು ಇಳಿಸಿ ಮಗುವಿನ ಬಳಿಗೆ ಧಾವಿಸುವಳು.

ಹೀಗೆ ನಾವೂ ಸಹ ಜಗನ್ಮಾತೆಯನ್ನು ಮರೆತು ಲೌಕಿಕ ಆನಂದಗಳಲ್ಲಿ ಮುಳುಗಿರುವಾಗ, ಜಗನ್ಮಾತೆಯು ನಮ್ಮ ಮೇಲೆ ಗಮನ ವಿಟ್ಟಿದ್ದರೂ, ನಮಗೆ ಅಡ್ಡಿಪಡಿಸುವುದಿಲ್ಲ. ಒಂದು ವೇಳೆ ನಾವು ವೈರಾಗ್ಯ ಹೊಂದಿ ಬಂಧನವನ್ನು ಬಿಡಿಸಿಕೊಂಡು, ಅವಳ ಕಡೆ ತಿರುಗಿದರೆ, ಆ ಮಾತೆಯು ನಮ್ಮ ರಕ್ಷಣೆಗಾಗಿ ಧಾವಿಸುವಳು.

ಭಕ್ತಿಶಾಸ್ತ್ರ ಗ್ರಂಥಗಳು, 'ಪ್ರಪತ್ತಿ' ಎಂದರೆ 'ಸಂಪೂರ್ಣ ಶರಣಾಗತಿ'ಯೇ ಸುಲಭ ಮಾರ್ಗ ಎಂದು ಹೇಳುತ್ತವೆ. ಪತಂಜಲಿಯು ತನ್ನ ಯೋಗಸೂತ್ರಗಳಲ್ಲಿ (೧.೨೩) ಭಗವಂತನಲ್ಲಿ ಸಂಪೂರ್ಣ ಭಕ್ತಿ ಇಟ್ಟರೆ ಸಮಾಧಿ ಸಿದ್ಧಿಸುವುದೆಂದು ಹೇಳಿದ್ದಾನೆ.

ಭಗವಾನ್ ಶ್ರೀಕೃಷ್ಣನು, ಭಗವದ್ಗೀತೆಯ ಚರಮಶ್ಲೋಕ (೧೮–೬೬) ಎಂದು ಪರಿಗಣಿಸಿರುವ ಶ್ಲೋಕದಲ್ಲಿ ಎಲ್ಲವನ್ನೂ ತ್ಯಜಿಸಿ ತನ್ನಲ್ಲಿಯೇ ಸಂಪೂರ್ಣ ಶರಣಾಗತಿಯನ್ನು ಹೊಂದಿದರೆ, ಮೋಕ್ಷವನ್ನು ಕೊಡುವೆನೆಂದು ಆಶ್ವಾಸನೆ ನೀಡಿದ್ದಾನೆ.

ಹೀಗೆ ಶ್ರೀರಾಮಕೃಷ್ಣರು, ಆಧ್ಯಾತ್ಮಿಕ ಸಾಧನೆಗಳ ಒಳಗುಟ್ಟನ್ನು ನಮಗೆ ಸಂಗ್ರಹಿಸಿಕೊಟ್ಟಿದ್ದಾರೆ, ಅದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲೂ, ಸಾಧನಪಥದಲ್ಲಿ ಮುಂದುವರಿಯಲೂ ದಾರಿಯನ್ನೂ ತೋರಿದ್ದಾರೆ. ▸ **(ಅನುವಾದ:** ಎನ್.ಪ್ರಭಾಕರ್)

# ಶ್ರೀರಾಮಕೃಷ್ಣರು ಉಪದೇಶಿಸಿದ ಯುಗಧರ್ಮ

ಸ್ವಾಮಿ ಗೌತಮಾನಂದ

೧೯೫೭ರಲ್ಲಿ ದೆಹಲಿಯ ರಾಮಕೃಷ್ಣ ಆಶ್ರಮದಲ್ಲಿ ಶ್ರೀರಾಮಕೃಷ್ಣರ ಶಿಲಾಮೂರ್ತಿಯ ಪ್ರತಿಷ್ಠಾಪನೆಯಾಯಿತು. ಶ್ರೀರಾಮಕೃಷ್ಣರ ಅಮೃತಶಿಲೆಯ ಮೂರ್ತಿಯನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸುವಾಗ, ಅಲ್ಲಿನ ಕೂಲಿಗಳು ಈ ರೀತಿ ಉದ್ಗರಿಸಿದರು: "ಅಯ್ಯೋ, ಇಂಥ ದೇವಸ್ಥಾನದಲ್ಲಿ ಈ ಒಬ್ಬ ಬಾಬಾಜಿಯ (ಸಂನ್ಯಾಸಿ) ಮೂರ್ತಿಯನ್ನು ಇಡುತ್ತಿದ್ದೀರಲ್ಲಾ?" ಈ ಮಾತು ಶ್ರೀರಾಮಕೃಷ್ಣರು ಎಷ್ಟು ಸರಳರು, ಆಡಂಬರರಹಿತರು ಎನ್ನುವ ಅವರ ವೈಶಿಷ್ಟ್ಯವನ್ನು ತಿಳಿಸುತ್ತದೆ. ಹೇಗೆಂದರೆ ಒಮ್ಮೆ ಶ್ರೀರಾಮನನ್ನು "ನೀನೇ 'ವಿಷ್ಣು' ಎಂದು ಹೊಗಳಿದಾಗ, ರಾಮನು "ನಾನು ದಶರಥನ ಮಗ ರಾಮ ಎಂದಷ್ಟೇ ನನಗೆ ಗೊತ್ತು" **(ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ)"** ಎಂದನಂತೆ.

**ಆಧುನಿಕ ಯುಗದ ಆಧ್ಯಾತ್ಮಿಕ ಆದರ್ಶ ಯಾವುದು? ಇದಕ್ಕೆ ಉತ್ತರ ಶ್ರೀರಾಮಕೃಷ್ಣರ ಬೋಧನೆಗಳಲ್ಲಿ ನಮಗೆ ದೊರಕುತ್ತದೆ. ಈ ಕಾಲದ ಹಲವಾರು ಸಮಸ್ಯೆಗಳಿಗೆ ಅವುಗಳಲ್ಲಿ ಸೂಕ್ತ ಪರಿಹಾರ ಸಿಕ್ಕುತ್ತದೆ. ಈ ವಿಷಯವನ್ನು ಸರಳವಾಗಿ, ಮಾರ್ಮಿಕವಾಗಿ ತಿಳಿಸಿಕೊಟ್ಟಿರುವ ಪರಮ ಪೂಜ್ಯ ಸ್ವಾಮೀಜಿಯವರು ಚೆನ್ನೈನಲ್ಲಿನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರು. ಇದಲ್ಲದೆ, ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳಲ್ಲಿ ಒಬ್ಬರು.**

"ದೇವರೇ ಇಲ್ಲ" ಎನ್ನುವ ನಾಸ್ತಿಕರು, "ಅವನು ಇದ್ದರೂ ಯಾರೂ ಅವನನ್ನು ನೋಡಿಲ್ಲ, ಪ್ರಪಂಚದ ಕಷ್ಟಗಳನ್ನು ನೋಡಿಯೂ ಏನನ್ನೂ ಮಾಡದಿರುವ ಅವನು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ" ಎನ್ನುವ ಅಜ್ಞೇಯತಾವಾದಿಗಳು, ಎಲ್ಲವೂ ಜಡಪದಾರ್ಥಗಳಿಂದಲೇ ಆಗಿದೆ, ಹಾಗೆಯೇ ಮನುಷ್ಯನ ಆತ್ಮವೂ ಸಹ ಎನ್ನುವ ಜಡವಾದಿಗಳು – ಇಂತಹವರ ಸಂಖ್ಯೆ ಹೆಚ್ಚಿ ಧರ್ಮದ ವಿಡಂಬನೆಯುಂಟಾಗುತ್ತಿದ್ದ ಸಮಯ ಅದು. "ಧರ್ಮದ ಅವನತಿ, ಅಧರ್ಮದ ಉನ್ನತಿಯಾದಾಗ ನಾನು ಅವತರಿಸುತ್ತೇನೆ" ಎಂದಿದ್ದ ಶ್ರೀಕೃಷ್ಣ ಪರಮಾತ್ಮನು 'ಅತ್ಯಂತ ಸರಳವಾದ ರೂಪದಲ್ಲಿ, ಪ್ರೀತಿ ತುಂಬಿದ ಒಡಲಿನಲ್ಲಿ, ಮನುಷ್ಯರ ಮೇಲೆ ಅಪಾರ ಕರುಣೆ ಮತ್ತು ಕೃಪೆದೋರುವ ಸಲುವಾಗಿ' ಭಗವಾನ್ ಶ್ರೀರಾಮಕೃಷ್ಣರ ರೂಪದಲ್ಲಿ ಕಾಮಾರಪುಕುರ ಎಂಬಲ್ಲಿ ೧೮೩೬ರಲ್ಲಿ ಅವತಾರಗೈದನು.



ಶ್ರೀರಾಮಕೃಷ್ಣರು, ದಕ್ಷಿಣೇಶ್ವರದಲ್ಲಿ ಭವತಾರಿಣಿ ಕಾಳೀದೇವಿಯ ಉಪಾಸನೆಯಿಂದ ಆರಂಭಿಸಿ ರಾಮ, ಕೃಷ್ಣ, ಸೀತೆ, ರಾಧೆ, ದುರ್ಗೆ, ಯೇಸುಕ್ರಿಸ್ತ, ಮೊಹಮ್ಮದ್ ಮುಂತಾದವರ ಭಾವಗಳಲ್ಲಿ ಸಾಧನೆ ಮಾಡಿ, ಇರುವ ಒಬ್ಬನೇ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡರು. ಆ ಒಬ್ಬನೇ ಪರಮಾತ್ಮನಿಂದ ಈ ಪ್ರಕೃತಿ, ಮನುಷ್ಯ, ಪ್ರಾಣಿ–ಪಕ್ಷಿ ಎಲ್ಲವೂ ರೂಪುಗೊಂಡಿವೆ; ಅವನೇ ಎಲ್ಲದರಲ್ಲಿಯೂ ತುಂಬಿದ್ದಾನೆ ಎಂದು ಬೋಧಿಸಿದರು. ಎಲ್ಲರ ಸೇವೆಯ ಮೂಲಕ ಅವನನ್ನೇ ಸೇವಿಸುತ್ತೇವೆ, 'ಜೀವಸೇವೆಯೇ ಶಿವಸೇವೆ' ಎಂದು ತಿಳಿಸಿದರು. ದೇವರು ಸಾಕಾರನೂ ಹೌದು, ನಿರಾಕಾರನೂ ಹೌದು, ಸಾಕಾರ–ನಿರಾಕಾರವನ್ನು ಮೀರಿದವನೂ ಹೌದು. ಅವನೇ ಈ ಜಗತ್ತೆಲ್ಲಾ ಆಗಿ, 'ವಿಶ್ವರೂಪ'ನಾಗಿದ್ದಾನೆ ಎಂದೂ ಉಪದೇಶಿಸಿದರು.

ಸುರೇಶ್ ಮಿತ್ರ ಎಂಬ ಭಕ್ತನು ಒಂದು ತೈಲಚಿತ್ರವನ್ನು ತಯಾರು ಮಾಡಿಸಿದನು. ಅದರಲ್ಲಿ ಎಲ್ಲಾ ಮತಗಳ ಮುಖಂಡರೂ ಒಟ್ಟಾಗಿ ಸೇರಿ, ಅವರವರ ಸಂಪ್ರದಾಯಕ್ಕೆ ಅನುಗುಣವಾಗಿ ಭಗವಂತನನ್ನು ಸ್ತುತಿಸಿ ಆರಾಧಿಸುತ್ತಿರುವುದನ್ನು ಚಿತ್ರಿಸಲಾಗಿದೆ.

ಶ್ರೀರಾಮಕೃಷ್ಣರು ಇದನ್ನು ನೋಡಿ ಸಂತೋಷಗೊಂಡು, "ಹೌದು, ಇದೇ ಈ ಯುಗದ ಭಾವ. ಎಲ್ಲಾ ಮತಗಳು ಸೌಹಾರ್ದದಿಂದ ಬಾಳಬೇಕು ಎಂಬ ಭಾವ" ಎಂದು ಹೇಳಿದರು.

ಈ ಆಧುನಿಕ ಯುಗ ವಿಶ್ವಾತ್ಮಕಭಾವನೆಯ (Universalism) ಯುಗ, ಸಾರ್ವಭೌಮತ್ವದ ಯುಗ. ಎಲ್ಲಾ ದೇಶದವರು, ಎಲ್ಲಾ ಜನರು ಒಪ್ಪಿದ್ದನ್ನೇ ಸ್ವೀಕರಿಸುವ ಯುಗ. ಇಂಥ ಕಾಲದಲ್ಲಿ "ನನ್ನ ಮತ ಮಾತ್ರ ಶ್ರೇಷ್ಠ" ಎಂದರೆ ಯಾವ ಬುದ್ಧಿವಂತರೂ ಒಪ್ಪಿಕೊಳ್ಳರು. ಅಲೋಪತಿಯೇ ಸರಿಯಾದ ಔಷಧ, ಬಿಳಿಯ ಜನರೇ ರಾಜ್ಯವಾಳಬಲ್ಲರು, ದುಡ್ಡಿದ್ದವನೇ ದೊಡ್ಡವನು – ಇಂಥ ಎಲ್ಲಾ ಕುರುಡುನಂಬಿಕೆಗಳೂ ಈಗ ಮಾಯವಾಗುತ್ತಿವೆ. ಇಂತಹ ಸಂದರ್ಭದಲ್ಲಿ, "ಎಲ್ಲಾ ಧರ್ಮಗಳೂ ಭಗವಂತನನ್ನು ಪಡೆಯುವ ದಾರಿಗಳು; ಎಲ್ಲವೂ ಸರಿಯಾದುವು, ಎಲ್ಲವೂ ಸತ್ಯವಾದುವು" ಎಂದು ತಾವೇ ಅನುಭವಿಸಿದ ಸತ್ಯವನ್ನು ಘೋಷಿಸಿದ ಮಹಾಪುರುಷರು ಶ್ರೀರಾಮಕೃಷ್ಣರು.

೨೦೦೧, ಸೆಪ್ಟೆಂಬರ್ ೧೧ ರಂದು ಅಮೆರಿಕದಲ್ಲಿ ನಡೆದ ದುರ್ಘಟನೆ 'ಮತಾಂಧತೆ'ಯ ಮಹಾಪಾತಕ ಕಾರ್ಯ. ಈಗ ಇಡೀ ಜಗತ್ತು ಮತಗಳ ನಡುವಣ ಸೌಹಾರ್ದತೆ ಎಷ್ಟು ಮುಖ್ಯವೆಂಬುದನ್ನು ಅರಿತುಕೊಳ್ಳುತ್ತಿದೆ. ನಾನು ಇತ್ತೀಚೆಗೆ ಅಮೆರಿಕದಲ್ಲಿನ 'ಚಿಕಾಗೊ ಕಲಾವಸ್ತು ಸಂಗ್ರಹಾಲಯ'ಕ್ಕೆ ಭೇಟಿ ನೀಡಿದ್ದೆ. ಅಲ್ಲಿಗೆ ಬಂದಿದ್ದ ಫ್ರಾನ್ಸ್, ಇಸ್ರೇಲ್ ಮುಂತಾದ ದೇಶಗಳಿಗೆ ಸೇರಿದ ಜನರು 'ಧರ್ಮಸಮನ್ವಯ'ದ ವಿಷಯವಾಗಿ ನನ್ನಲ್ಲಿ ಪ್ರಸ್ತಾಪಿಸಿದರು.

ಯುಗಾವತಾರ ಪುರುಷರು ಸನಾತನಧರ್ಮವನ್ನು ನಮ್ಮ ಕಾಲಕ್ಕೆ, ಸಂದರ್ಭಕ್ಕೆ ತಕ್ಕಂತೆ ಅಳವಡಿಸಿಕೊಡುತ್ತಾರೆ. ಶ್ರೀರಾಮಕೃಷ್ಣರು ಹೇಳುತ್ತಾರೆ, "ಮೊಘಲ್ ರಾಜ್ಯದ ಚಿನ್ನದ ನಾಣ್ಯಗಳು ಬ್ರಿಟಿಷ್ ರಾಜ್ಯದಲ್ಲಿ ಚಲಾವಣೆ ಆಗುವುದಿಲ್ಲ. ಆದರೆ ಅವನ್ನು ಕರಗಿಸಿ, ಬ್ರಿಟಿಷ್ ರಾಣಿಯ ಚಿತ್ರ ಅಚ್ಚುಹಾಕಿಸಿದರೆ ಅವು ಸುಲಭವಾಗಿ ಚಲಾವಣೆಯಾಗುವುವು. ಅದರಂತೆ ಸನಾತನಧರ್ಮವು ಈ ಯುಗಕ್ಕೆ ತಕ್ಕಂತೆ ಸರಳವಾಗಿಯೂ, ವ್ಯಾವಹಾರಿಕವಾಗಿಯೂ ಇದ್ದಾಗ ಮಾತ್ರ ಅದು ಯುಗಧರ್ಮವಾಗುವುದು." ಅದನ್ನೇ ಶ್ರೀರಾಮಕೃಷ್ಣರು ಮಾಡಿದ್ದಾರೆ. ಸಾಮಾನ್ಯ ಜನರು ಪರಮಾತ್ಮನ ದರ್ಶನ ಹೇಗೆ ಪಡೆಯಬಹುದು ಎಂಬ ವಿಷಯದಲ್ಲಿ ಅವರೆನ್ನುತ್ತಾರೆ, "ನಾಮಜಪದಿಂದ, ದೇವರ ಮಹಿಮೆಯನ್ನು ಹಾಡುವುದರಿಂದ, ವ್ಯಾಕುಲತೆಯಿಂದ ಪ್ರಾರ್ಥಿಸುವುದರಿಂದ, ಒಂಟಿಯಾಗಿದ್ದುಕೊಂಡು 'ಪರಮಾತ್ಮನೇ ಸತ್ಯ, ಉಳಿದದ್ದೆಲ್ಲಾ ಎರಡು ದಿನದ್ದು' ಎಂದು ವಿಚಾರ ಮಾಡುವುದರಿಂದ." ಇವುಗಳನ್ನು ಯಾರು ಬೇಕಾದರೂ– ಹೆಂಗಸರು, ಗಂಡಸರು, ಎಲ್ಲಾ ಧರ್ಮದವರು, ಬಡವರು ಬಲ್ಲಿದರು – ಎಲ್ಲರೂ ಅಭ್ಯಾಸ ಮಾಡಬಹುದು, ಭಗವಂತನನ್ನು ಕಾಣಬಹುದು. ಆಹಾ! ಇದು ಎಷ್ಟು ಸರಳವಾದುದು, ಎಷ್ಟು ಉದಾರವಾದ ಧರ್ಮ! ಆಧುನಿಕ ಯುಗದಲ್ಲಿ ಹಣ ಸಂಪಾದಿಸುವ ಪೈಪೋಟಿಯಲ್ಲಿದ್ದುಕೊಂಡೂ ಅವರು ಹೇಳಿರುವ ಈ ಧರ್ಮವನ್ನು ಪಾಲಿಸಬಹುದು, ಕೃತಕೃತ್ಯರಾಗಬಹುದು. ಇದೇ ಶ್ರೀರಾಮಕೃಷ್ಣರು ನಮಗೆ ಕೊಟ್ಟಿರುವ ಯುಗಧರ್ಮ!

ಧರ್ಮದ ವಿಷಯದಲ್ಲಿ ಸಾಮಾನ್ಯವಾಗಿ ಕೇಳಿಬರುವ ಪ್ರಶ್ನೆ ಇದು: "ಧರ್ಮವಿಲ್ಲದೆಯೂ ಸುಖವಾಗಿ ಬಾಳಲಾಗದೆ? ದುಡ್ಡು–ಕಾಸು, ಒಳ್ಳೆಯ ಆರೋಗ್ಯ, ಒಳ್ಳೆಯ ಕುಟುಂಬ ಇದ್ದರೆ ಸುಖವಾಗಿರಬಹುದಲ್ಲ?" ಅದಕ್ಕೆ ಶ್ರೀರಾಮಕೃಷ್ಣರು ಹೇಳುತ್ತಾರೆ, ಹಣವಾಗಲಿ, ಆರೋಗ್ಯವಾಗಲಿ, ಕುಟುಂಬವಾಗಲಿ, ಒಂದೇ ರೀತಿ ಚೆನ್ನಾಗಿ ಇರುತ್ತವೆಯೇ? ಸಾಧ್ಯವೇ ಇಲ್ಲ; ಅವು ಬರುತ್ತವೆ, ಹೋಗುತ್ತವೆ. ಕೊನೆಗೆ ಮರಣ ಬಂದಾಗ ಸಂಪೂರ್ಣವಾಗಿ ಅವು ನಮ್ಮನ್ನು ಕೈಬಿಡುತ್ತವೆ. ಹಾಗೆಂದೇ ಶ್ರೀಕೃಷ್ಣ ಗೀತೆಯಲ್ಲಿ ಹೇಳುತ್ತಾನೆ, **ಅನಿತ್ಯಮ್ ಅಸುಖಂ ಲೋಕಮ್ ಇಮಂ ಪ್ರಾಪ್ಯ ಭಜಸ್ವ ಮಾಂ ॥** (ಯಾವಾಗಲೂ ಬದಲಾಗುತ್ತಿರುವ ದುಃಖಮಯವಾದ ಈ ಪ್ರಪಂಚಕ್ಕೆ ಬಂದು, ಅದರ ಕೋಟಲೆಯಿಂದ ತಪ್ಪಿಸಿಕೊಳ್ಳಬೇಕಾದರೆ, ನನ್ನನ್ನು ಸೇವಿಸು) ಎಂದು. ಶ್ರೀರಾಮಕೃಷ್ಣರು ಇದನ್ನೇ ಎಷ್ಟು ಸುಂದರವಾಗಿ ಹೇಳುತ್ತಾರೆ ನೋಡಿ, "ಪ್ರಪಂಚದ ಎಲ್ಲಾ ಸುಖಗಳೂ 'ಸೊನ್ನೆ'ಗಳಂತೆ. ಏಕೆಂದರೆ ಹಣ, ಆರೋಗ್ಯ, ಕುಟುಂಬ – ಇವೆಲ್ಲವೂ ಕೊನೆಯಲ್ಲಿ ಕೈಬಿಡುವುದರಿಂದ ಅವು ಸೊನ್ನೆಗಳಂತೆಯೇ. ಇಂತಹ ಸೊನ್ನೆಗಳ ಹಿಂದೆ 'ಒಂದನ್ನು'(೧) ಕೂಡಿಸಿಬಿಟ್ಟರೆ, ಸೊನ್ನೆಗಳೂ ಬೆಲೆಯುಳ್ಳ ಅಂಕಗಳಾಗಿಬಿಡುತ್ತವೆ! ಹಣ, ಆರೋಗ್ಯ, ಕುಟುಂಬಗಳ ಮೂಲಕ ನಾವು ಭಗವಂತನ ಸ್ಮರಣೆ ಮತ್ತು ಸೇವೆ ಮಾಡುವುದಾದರೆ, ಅವೆಲ್ಲವೂ ಬಹು ದೀರ್ಘಕಾಲದ ಕೀರ್ತಿಯನ್ನೂ, ಶಾಂತಿ–ಸುಖವನ್ನೂ ಕೊಡುತ್ತವೆ ಎಂಬುದೇ ನಿಜವಾದ ಸತ್ಯ!

ಶ್ರೀರಾಮಕೃಷ್ಣರು ಗೃಹಸ್ಥರಿಗೆ ದೇವರಿಗಾಗಿ ಬಾಹ್ಯತ್ಯಾಗ ಮಾಡಲು ಹೇಳುತ್ತಿಲ್ಲ. ಪ್ರಪಂಚದಲ್ಲಿದ್ದುಕೊಂಡೇ ಕೆಲವು ಆಧ್ಯಾತ್ಮಿಕ ಮೌಲ್ಯಗಳನ್ನು ಪಾಲಿಸಿದರೆ ಅವರಿಗೆ ಪರಮಾತ್ಮನ ದರ್ಶನವೂ ದೊರಕುವುದು, ಪ್ರಾಪಂಚಿಕ ಜೀವನವೂ ಸಿಹಿಯಾಗುವುದು ಎನ್ನುತ್ತಾರೆ. ಅವು ಯಾವ ಮೌಲ್ಯಗಳು? **ಸತ್ಯ, ಪವಿತ್ರತೆ, ನಿಃಸ್ವಾರ್ಥತೆ, ಶ್ರದ್ಧೆ, ವ್ಯಾಕುಲತೆಯಿಂದ ಪ್ರಾರ್ಥನೆ** – ಇವೇ ಆ ಮೌಲ್ಯಗಳು. ಅವರು ಹೇಳುತ್ತಾರೆ, ಸತ್ಯದಿಂದ ಭಗವಂತನ ಸಾನ್ನಿಧ್ಯದಲ್ಲೇ ಇರುವಂತಾಗುತ್ತದೆ. ಸತ್ಯದಿಂದ ಜಗತ್ತಿನಲ್ಲಿ ಗೌರವ ಮರ್ಯಾದೆಗಳೂ ಸಿಗುತ್ತವೆ, ಪವಿತ್ರತೆಯಿಂದ ಶರೀರ, ಮನಸ್ಸುಗಳಲ್ಲಿ ಅದಮ್ಯವಾದ ಶಕ್ತಿ, ಉತ್ಸಾಹ ಉಂಟಾಗಿ ದಿವ್ಯದರ್ಶನ, ಅನುಭವಗಳಿಗೆ ಅರ್ಹತೆಯುಂಟಾಗುತ್ತದೆ. ನಿಃಸ್ವಾರ್ಥತೆಯಿಂದ ಚಿತ್ತಶುದ್ಧಿಯಾಗಿ ಭಗವತ್ಸೇವೆಯಲ್ಲಿ ಪ್ರೀತಿ ಹೆಚ್ಚಾಗಿ, ದೇವರ ದರ್ಶನವಾಗುತ್ತದೆ. ಶ್ರದ್ಧೆಯಿಂದ ಎಂತಹ ದುಸ್ಸಾಧ್ಯವಾದ ಸಾಧನೆಯೂ ಸಾಧ್ಯವಾಗುತ್ತದೆ. ವ್ಯಾಕುಲತೆಯಿಂದ ಕೂಡಿದ ಪ್ರಾರ್ಥನೆಯಿಂದ ಭಗವಂತನ ಕೃಪೆಯೊದಗಿ ದರ್ಶನ ಶೀಘ್ರವಾಗಿ ದೊರಕುತ್ತದೆ. ಶ್ರೀರಾಮಕೃಷ್ಣರು ವಿಶ್ವದ ಎಲ್ಲಾ ಧರ್ಮಗಳ ಸಾರವನ್ನೂ, ಅವುಗಳ ಮೂಲಭೂತ